# ರಾಗಕನ್ನೆ ನುಡಿವ ವೇಳೆ

ರಾಗಕನ್ನೆ ನುಡಿವ ವೇಳೆ ಚಿಂತೆಯೇನೆ ನಳಿನ ನಯನೆ
ಮೊಳ್ಳೆ ಬಾಡುತಿಹುದು ನೋಡೆ ನಿನ್ನ ಉಸಿರ ಕಾವಿಗೆ

ಚಿಂತೆ ಕಟೆದ ಪ್ರತಿಮೆಯಾಗಿ ಕುಳತ ನಿನ್ನ ಭಂಗಿ ನೋಡಿ
ಗಿಳಿಯು ಬಂಡಿ ತಿರುವಿ ಮಾರ ಹೊರಟ ರತಿಯ ಮಹಡಿಗೆ

ಚಿಂತೆ ತೊಳೆದು ಮುನಿಸನಾರ ಮುಖದಿ ತಳೆಯೆ
ಬೆಳ್ದಾವರೆಯ ಮೇಲೆ ಅರುಣ ಕಿರಣ ಬಿದ್ದ ಹಾಗೆ

ಮುನಿಸೆ ಇರದೆ ಮುದಿತವೆಲ್ಲೆ ಮುಗುದೆ ಮುದ್ದಿಗೆ
ಅಲರು ಮೋರೆಗೇಕೆ ಹೊದಿಕೆ ತೆರೆಯೆ ಎಲರ ತಂಪಿಗೆ.

ಮದನ ಬಾಣವೇಕೆ ಎದೆಗೆ ನಿನ್ನ ಕಣ್ಣೆ ಸಾಲದೆ
ನಿನ್ನ ಮುತ್ತೆ ಮದ್ದು ನಲ್ಲೆ ನನ್ನ ಎದೆಯ ಗಾಯಕೆ

ಬೇಟದಾಟಕೆಂದು ಚಂದ್ರ ಸಿದ್ಧವಿಟ್ಟ ಜೊನ್ನ ಸಜ್ಜೆ
ಅನುರಾಗದ ಸುಗ್ಗಿ ಸುಖದ ರಾಗ ಭೋಗಕೆ

**● ಸ. ರಘುನಾಥ**

ಕಲೆ: ವಾಗೀಶ ಹೆಗಡೆ

